**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ**

**ಆಳಂದ**

ಸಿ.ಸಿ, ನಂಬರ 3643/2023 ಸಿ.ಡಬ್ಲೂ.8 ಪಿ.ಡಬ್ಲೂ.4

| | |
|---|---|
| ಹೆಸರು | ಮಲಗೊಂಡ |
| ತಂದೆ/ಗಂಡ | ಶರಣಪ್ಪಾ |
| ವಯಸ್ಸು | 47 ವರ್ಷ |
| ಉದ್ಯೋಗ | ಮುಖ್ಯ ಪೇದೆ |
| ವಾಸಸ್ಥಳ | ನಿಂಬರ್ಗಾ |

ದಿನಾಂಕ 07-03-2026

ಸತ್ಯ ಪ್ರತಿಜ್ಞೆಯ ಮೇರೆಗೆ

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:**

ನಾನು 2009 ರಿಂದ ಇಲ್ಲಿಯವರೆಗೆ ನಿಂಬರ್ಗಾ ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 07-03-2023 ರಂದು ಚಾಸಾ 1 ರವರು ರಾ. 9.00 ಗಂಟೆಗೆ ಠಾಣೆಗೆ ಹಾಜರಾಗಿ ಒಬ್ಬ ಆರೋಪಿ, ಮು.ಮಾಲು, ಜಪ್ತಿ ಪಂಚನಾಮೆ ಮತ್ತು ವರದಿಯನ್ನು ಸಲ್ಲೀಸಿದ್ದು ಸದರಿ ಆಧಾರದ ಮೇಲೆ ಠಾಣಾ ಗುನ್ನಾ ಸಂಖ್ಯೆ 15/2023 ಅಂತಾ ಪ್ರಕರಣವನ್ನು ದಾಖಲಿಸಿಕೊಂಡು ನಮ್ಮ ಸಿಬ್ಬಂದಿಯ ಮುಖಾಂತರ ಪ್ರ.ವ.ವ.ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟು, ಅದೇ ದಿನ ಆರೋಪಿಗೆ ಕಲಂ 41 ಎ ಅಡಿಯಲ್ಲಿ ನೋಟಿಸು ನೀಡಿ ಬಿಡುಗಡೆ ಮಾಡಿರುತ್ತೇನೆ. ಅದೇ ದಿನ ಚಾಸಾ 4 ಮತ್ತು 5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ನ್ಯಾಯಾಲಯಕ್ಕೆ ಪಿ.ಎಫ್ ಸಲ್ಲಿಸಿ ಮು.ಮಾಲನ್ನು ಪ್ರಕರಣ ಮುಗಿಯುವರೆಗೂ ಠಾಣೆಯಲ್ಲಿ ಇಟ್ಟಿಕೊಳ್ಳಲು ಅನುಮತಿ ಪಡೆದಿರುತ್ತೇನೆ. ದಿಃ 16-03-2023 ರಂದು ಚಾಸಾ 6 ರವರ ಮುಖಾಂತರ FSL ಪರೀಕ್ಷೆಗೆ ಮು. ಮಾಲನ್ನು ಕಳುಹಿಸಿಕೊಟ್ಟೇನು. ದಿಃ 15-06-2023 ರಂದು FSL ವರದಿಯನ್ನು ಪಡೆದುಕೊಂಡಿರುತ್ತೇನೆ. ದಿಃ 30-06-2023 ರಂದು ತನಿಖೆ ಪೂರ್ಣಗೊಂಡ ಕಾರಣ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ದಿಃ 07-03-2023 ರಂದು ನೀಡಿದ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 2, ಸಾಕ್ಷಿಯ ಸಹಿಯನ್ನು ನಿಪಿ. 2(ಎ) ಅಂತಾ ಗುರುತಿಸಲಾಯಿತು. ಪ್ರ.ವ.ವ.ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.3, ಸಾಕ್ಷಿಯ ಸಹಿಯನ್ನು ನಿಪಿ.3(ಎ) ಅಂತಾ ಗುರುತಿಸಲಾಯಿತು. ದಿಃ 16-03-2023 ರ ಹಿಂಬರಹವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 4 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 4(ಎ) ಅಂತಾ ಗುರುತಿಸಲಾಯಿತು. FSL ನೋಡಿ ಗುರುತಿಸಿದ್ದು ಅದನ್ನು ನಿಪಿ. 5 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 5(ಎ) ಅಂತಾ ಗುರುತಿಸಲಾಯಿತು. ಸಾಕ್ಷಿಯ ಈಗಾಗಲೇ ಗುರುತಿಸಲಾದ ಮು. ಮಾ. 1 ರಿಂದ 4 ನ್ನು ನೋಡಿ ಗುರುತಿಸುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಅಂತಾ ನುಡಿಯುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ **ಶ್ರೀ. ಕೆ.ವಿ.ಆರ್.** ವಕೀಲರಿಂದ:

ದಿಃ 07-03-2023 ರಂದು ನನ್ನ ಕೆಲಸವು ಬೆ. 8.00 ರಿಂದ ಮರುದಿನ ಬೆ.8.00 ಗಂಟೆಯವರೆಗೆ ಇತ್ತು. ಸದರಿ ನನ್ನ ಹಾಜರಾತಿಯನ್ನು ಠಾಣಾ ದಿನಚರಿಯಲ್ಲಿ ನಮೂದು ಮಾಡಿರುತ್ತೇನೆ. ನಾನು ಹಾಜರಾತಿಯ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಮುದ್ದೇ ಮಾಲುಗಳು ಸಾಮಾನ್ಯವಾಗಿ ಎಲ್ಲಾ ಮಧ್ಯದ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ನಾನು ಹೇಳಿಕೆಗಳನ್ನು ಠಾಣೆಯಲ್ಲಿ ಪಡೆದಿರುತ್ತೇನೆ. ನಾನು ಠಾಣೆಯಲ್ಲಿ ಹೇಳಿಕೆಗಳನ್ನು ಪಡೆದಿರುತ್ತೇನೆ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೇ ಮಾಲನ್ನು ಎಲ್ಲಿಂದ ಖರೀದಿ ಮಾಡಿದ್ದರು ಅಂತಾ ತನಿಖೆ ಮಾಡಿರುವುದಿಲ್ಲ. ಯಾವುದೇ ಘಟನೆ ನಡೆಯದೇ ಇದ್ದರೂ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ವರದಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೇ ಮಾಲುಗಳ ಒಟ್ಟು ಬೆಲೆ ಅಂದಾಜು ರೂ. 2000/-ಗಳು ಆಗಬಹುದು. ರೂ. 650/-ರ ಮುಖ ಬೆಲೆಯನ್ನು ಹೇಳಲು ಬರುವುದಿಲ್ಲ. ಘಟನಾ ಸ್ಥಳವು ಯಾವ ಸರ್ವೆ ನಂಬರನಲ್ಲಿ ಇರುತ್ತದೆ ಅಂತಾ ಹೇಳಲು ಬರುವುದಿಲ್ಲ.

ದಿಃ 07-03-2023 ರಂದು ಚಾಸಾ 1 ರವರು ರಾ. 9.00 ಗಂಟೆಗೆ ಠಾಣೆಗೆ ಹಾಜರಾಗಿ ಒಬ್ಬ ಆರೋಪಿ, ಮು.ಮಾಲು, ಜಪ್ತಿ ಪಂಚನಾಮೆ ಮತ್ತು ವರದಿಯನ್ನು ಸಲ್ಲೀಸಿದ್ದು ಸದರಿ ಆಧಾರದ ಮೇಲೆ ಠಾಣಾ ಗುನ್ಹಾ ಸಂಖ್ಯೆ 15/2023 ಅಂತಾ ಪ್ರಕರಣವನ್ನು ದಾಖಲಿಸಿಕೊಂಡು ನಮ್ಮ ಸಿಬ್ಬಂದಿಯ ಮುಖಾಂತರ ಪ್ರ.ವ.ವ.ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟು, ಅದೇ ದಿನ ಆರೋಪಿಗೆ ಕಲಂ 41 ಎ ಅಡಿಯಲ್ಲಿ ನೋಟಿಸು ನೀಡಿ ಬಿಡುಗಡೆ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಚಾಸಾ 4 ಮತ್ತು 5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ನ್ಯಾಯಾಲಯಕ್ಕೆ ಪಿ.ಎಫ್ ಸಲ್ಲಿಸಿ ಮು.ಮಾಲನ್ನು ಪ್ರಕರಣ ಮುಗಿಯುವರೆಗೂ ಠಾಣೆಯಲ್ಲಿ ಇಟ್ಟಿಕೊಳ್ಳಲು ಅನುಮತಿ ಪಡೆದಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 16-03-2023 ರಂದು ಚಾಸಾ 6 ರವರ ಮುಖಾಂತರ FSL ಪರೀಕ್ಷೆಗೆ ಮು. ಮಾಲನ್ನು ಕಳುಹಿಸಿಕೊಟ್ಟೇನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 15-06-2023 ರಂದು FSL ವರದಿಯನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 30-06-2023 ರಂದು ತನಿಖೆ ಪೂರ್ಣಗೊಂಡ ಕಾರಣ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ